# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ

ಸಿ.ಸಿ. ನಂ.108/2020

CW-1/PW-2

| | | |
|---|---|---|
| ಹೆಸರು | ಃ- | ಡಾ.ರಾಮಪ್ರಸಾದ್ |
| ತಂದೆ ಹೆಸರು | ಃ- | ಲೇಟ್ ಚಿಕ್ಕಲಿಂಗಯ್ಯ |
| ವಯಸ್ಸು | ಃ- | 56 ವರ್ಷ |
| ವೃತ್ತಿ | ಃ- | ಇಂಜಿನೀಯರಿಂಗ್ ಕಾಲೇಜಿನಲ್ಲಿ ಪ್ರೊಫೆಸರ್ |
| ವಾಸ ಸ್ಥಳ | ಃ- | ಬಸವೇಶ್ವರನಗರ, ಬೆಂಗಳೂರು |
| ದಿನಾಂಕ | ಃ- | 26-06-2025. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಚಾಸಾ-2 ಮಾಯಮ್ಮ ನನ್ನ ತಾಯಿ. ಅವರು ತೀರಿಕೊಂಡಿರುತ್ತಾರೆ. ದಿನಾಂಕ 21.11.2019 ರಂದು ಮಧ್ಯಾಹ್ನ 2.30 ರ ಸಮಯದಲ್ಲಿ ನನ್ನ ತಾಯಿ ಮನೆಯಲ್ಲಿ ಮಲಗಿದ್ದಾಗ ರಾಮಚಂದ್ರಯ್ಯರವರು ನಮ್ಮ ಪಕ್ಕದ ಮನೆಯವರಾಗಿದ್ದು, ಅವರು ಹಿಂಬಾಗಿಲಿನಿಂದ ಬಂದು ನನ್ನ ತಾಯಿ ಮನೆಯಲ್ಲಿ ಮಲಗಿದ್ದಾಗ ಅವರ ಮುಖವನ್ನು ದಿಂಬಿನಿಂದ ಮುಚ್ಚಿ ಅವರ ಕುತ್ತಿಗೆಯಿಂದ ಚಿನ್ನದ ಸರವನ್ನು ಕಿತ್ತುಕೊಂಡು ಹೋಗಿರುತ್ತಾರೆ. ಈ ವಿಚಾರವನ್ನು ನನಗೆ ಲಕ್ಷ್ಮಣರವರು ಫೋನ್ ಮಾಡಿ ತಿಳಿಸಿದರು. ಸದರಿ ಚಾಸಾ-4 ಲಕ್ಷ್ಮಣರವರು ನನ್ನ ತಾಯಿಯನ್ನು ನಾರಾಯಣ ಆಸ್ಪತ್ರೆ, ರಾಮನಗರಕ್ಕೆ ಕರೆದುಕೊಂಡು ಹೋಗಿರುತ್ತಾರೆ. ನಾನು ಮನೆಗೆ ಬಂದೆ. ನನ್ನ ತಾಯಿಗೆ ಪ್ರಜ್ಞೆ ಇರಲಿಲ್ಲ. ಅವರನ್ನು ಬೆಂಗಳೂರಿನ ಕ್ಲಿನಿಕ್‌ನಲ್ಲಿ ತೋರಿಸಿದೆ. ಆರೋಪಿಯ ಸಂಬಂಧಿ ಮಹೇಶ್ ಎಂಬುವವರು

ಮರುದಿನ ಚಿನ್ನದ ಸರವನ್ನು ತಂದು ನನಗೆ ವಾಪಸ್ ಕೊಟ್ಟಿರುತ್ತಾರೆ. ಆ ಸಮಯಕ್ಕೆ ನನ್ನ ಸಹೋದರನಿಗೆ ಹುಷಾರಿರಲಿಲ್ಲ, ಆದ್ದರಿಂದ 15 ದಿನ, ಒಂದು ತಿಂಗಳ ನಂತರ ವಿಳಂಬವಾಗಿ ದೂರು ಕೊಟ್ಟೆವು. ಎಷ್ಟು ದಿನಗಳು ಎಂದು ನಿಖರವಾಗಿ ಜ್ಞಾಪಕವಿಲ್ಲ. ದೂರನ್ನು ನೋಡಿದರೆ ಗುರುತಿಸಬಲ್ಲೆ. ದೂರನ್ನು ಈಗ ನಿಪಿ-2 ಎಂದು, ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಿರುತ್ತೇನೆ.

2. ನಂತರ ಪೊಲೀಸರು ಮಹಜರ್‌ಗೆ ಸ್ಥಳಕ್ಕೆ ಬಂದು ಮಹಜರ್ ಮಾಡಿದರು. ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿದೆ. ಮಹಜರನ್ನು ಮಧ್ಯಾಹ್ನ ಒಂದು ಗಂಟೆಗಳ ಕಾಲ ಮಾಡಿದರು. ಮಹಜರ್ ಕಾಲಕ್ಕೆ ಬೇರೆ ವ್ಯಕ್ತಿಗಳು ಇದ್ದರು. ಅವರ ಹೆಸರು ಜ್ಞಾಪಕವಿಲ್ಲ. ಮಹಜರನ್ನು ನೋಡಿದರೆ ಗುರುತಿಸಬಲ್ಲೆ. ಮಹಜರನ್ನು ಈಗ ನಿಪಿ-3 ಎಂದು, ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಿರುತ್ತೇನೆ. ಮಹಜರ್ ಕಾಲಕ್ಕೆ ದಿಂಬನ್ನು ಜಪ್ತಿ ಮಾಡಿಕೊಂಡರು. ಅದನ್ನು ನೋಡಿದರೆ ಗುರುತಿಸಬಲ್ಲೆ. ದಿಂಬನ್ನು ಈಗ ಮು.ಮಾ-1 ಎಂದು ಗುರುತಿಸಿರುತ್ತೇನೆ. ಚಿನ್ನದ ಸರವನ್ನು ನೋಡಿದರೆ ಗುರುತಿಸಬಲ್ಲೆ. ಚಿನ್ನದ ಸರವನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲವೆಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

<u>ಪಾಟೀ ಸವಾಲು ಆರೋಪಿ ಪರ ಶ್ರೀ ಜಿ.ಕೆ., ವಕೀಲರಿಂದಃ-</u>

ನಾನು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿಲ್ಲ. ಚಾಸಾ-4 ಲಕ್ಷ್ಮಣ ನಮ್ಮ ಊರಿನವರೆ. ಚಾಸಾ-4 ರವರು ದೂರವಾಣಿ ಮುಖಾಂತರ ಮಾಡಿದ ಅವರ ದೂರವಾಣಿ ಸಂಖ್ಯೆ ಗೊತ್ತಿಲ್ಲ. ಅದೇ ದಿನ ದೂರು ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನ್ನ ತಮ್ಮನಿಗೆ ಕ್ಯಾನ್ಸರ್ ತೊಂದರೆ

ಇತ್ತು, ನಾನು ಬ್ಯುಸಿಯಾಗಿದ್ದೆ ಎಂದು ನುಡಿಯುತ್ತಾರೆ. ದೂರು ಕೊಟ್ಟಿದ್ದು ಘಟನೆ ನಡೆದ 15 ದಿನದಿಂದ ಒಂದು ತಿಂಗಳು ಇರಬಹುದು. ದೂರು ಕೊಟ್ಟಿದ್ದು ಮೂರು ತಿಂಗಳು 7 ದಿನಗಳ ನಂತರ ಎಂದರೆ ಇರಬಹುದು. ದೂರನ್ನು ಎಸ್.ಪಿ.,ರವರಿಗೆ ಕೊಟ್ಟಿದ್ದೆವು. ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಾನು ಎಸ್.ಪಿ.,ಯವರಿಗೆ ಕೊಟ್ಟೆ ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ ದೂರು ನೀಡುವಲ್ಲಿ ಯಾಕೆ ವಿಳಂಬವಾಗಿದೆ ಎಂದು ನಮೂದು ಮಾಡಿಲ್ಲ. ಮೂರು ತಿಂಗಳು 7 ದಿನಗಳ ನಂತರ ದೂರು ನೀಡಿರುವುದರಿಂದ ದೂರು ಊರ್ಜಿತವಲ್ಲ ಎಂದರೆ ಸರಿಯಲ್ಲ. ದಿಂಬುಗಳು ಎಲ್ಲರ ಮನೆಯಲ್ಲಿ ಇರುತ್ತವೆ ಎಂದರೆ ಸರಿ. ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡಿಲ್ಲ, ಪೊಲೀಸ್ ಠಾಣೆಯಲ್ಲಿ ಕುಳಿತು ಬರೆದು ನನ್ನ ಸಹಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿಲ್ಲದಿದ್ದರೂ ಸಹ ಆತನಿಗೆ ತೊಂದರೆ ಕೊಡಬೇಕೆಂದು ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.